**ದಿಃ 29-09-2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು** ಶ್ರೀ ಎಸ್. ಎಂ. ಎನ್ ವಕೀಲರಿಂದಃ-

ಈ ಹಿಂದೆ ನಾನು ಅಸಲು ದಾವಾ ಸಂಖ್ಯೆ 12/2009 ರಲ್ಲಿ ನಾನೇ ಸಾಕ್ಷಿ ಹೇಳಿದ್ದೆ ಅಂದರೆ ಸರಿ . ಈ ಕೇಸಿನ ಪ್ರತಿವಾದಿಗಳ ಕುಟುಂಬಕ್ಕೆ ಸಂಬಂಧಪಟ್ಟಂತೆ ನನಗೆ ವೈಯಕ್ತಿಕ ಮಾಹಿತಿ ಇದೆ . ಪ್ರತಿವಾದಿ ಕುಟುಂಬದ ಮೂಲ ಪುರಷ ರೇವಣಸಿದ್ದಪ್ಪ ತಂದೆ ಸಿದ್ದಲಿಂಗಪ್ಪ ಮತ್ತು ಈಶ್ವರಪ್ಪ . ಸಿದ್ದಲಿಂಗಪ್ಪನಿಗೆ ರೇವಣಸಿದ್ದಪ್ಪ ಮತ್ತು ಈಶ್ವರಪ್ಪ ಇಬ್ಬರು ಮಕ್ಕಳು ಅದರ ಮುಂದಿನ ವಿಚಾರ ನನಗೆ ಗೊತ್ತಿದೆ ಸಿದ್ದಲಿಂಗಪ್ಪನಿಗಿಂತ ಹಿಂದಿನವರ ವಿಚಾರ ನನಗೆ ಗೊತ್ತಿಲ್ಲ . ಸಿದ್ದಲಿಂಗಪ್ಪನ ತಂದೆಯ ಹೆಸರು ಗೊತ್ತಿಲ್ಲ . ಸಿದ್ದಲಿಂಗಪ್ಪನ ತಂದೆಗೆ ಎಷ್ಟು ಜನ ಮಕ್ಕಳು ಇದ್ದರು ಗೊತ್ತಿಲ್ಲ . ಅಸಲು ದಾವಾ ಸಂಖ್ಯೆ 12/2009 ರಲ್ಲಿ ಪ್ರತಿವಾದಿಗಳು ಏನು ಪ್ರತಿವಾದಿ ಪತ್ರ ಬರೆದು ಹಾಕಿದ್ದರು ಅಂತಾ ನನಗೆ ಗೊತ್ತಿದೆ. ಆ ಪ್ರತಿವಾದಿ ಪತ್ರದಲ್ಲಿ 1940 ರಲ್ಲಿ ಆದ ಪಾಲು ವಿಭಾಗದ ಬಗ್ಗೆ ಬರೆದಿದ್ದಾರೆ ಅಂದರೆ ಸರಿ . ಆ ಪಾಲು ವಿಭಾಗ ಯಾರು ಯಾರ ಮಧ್ಯ ಆಗಿದೆ ಅಂತಾ ನಾನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ . ಅಸಲು ದಾವಾ 12/2009 ರಲ್ಲಿ ಪ್ರತಿವಾದಿಯರು 1940 ರ ಪಾಲು ವಿಭಾಗ ಪತ್ರ ಹಾಜರುಪಡಿಸಿ ಅದು ನಿಡಿಃ6 ಅಂತಾ ಗುರುತಿಸಿಕೊಂಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ . ಆ ಪಾಲು ವಿಭಾಗ ಪತ್ರದಲ್ಲಿ ಎಷ್ಟು ಜನ ಪಕ್ಷಗಾರರು ಇದ್ದಾರೆ ಯಾರು ಯಾರಿಗೆ ಏನು ಪಾಲು ಬಂದಿದೆ ಗೊತ್ತಿಲ್ಲ. ಆ ಪಾಲು ವಿಭಾಗದಲ್ಲಿ ರೇವಣಸಿದ್ದಪ್ಪ ತಂದೆ ಸಿದ್ದಲಿಂಗಪ್ಪ ಸಹ ಪಕ್ಷಗಾರರು ಆಗಿದ್ದಾರೆ ಅಂದರೆ ಇರಬಹುದು . ಆ ಪಾಲು ವಿಭಾಗದಲ್ಲಿ ರೇವಣಸಿದ್ದಪ್ಪನಿಗೆ ಏನೇನು ಆಸ್ತಿಗಳು ಬಂದಿವೆ ಗೊತ್ತಿಲ್ಲ . ಸರ್ವೆ ನಂಬರ್ 135/ಎ ಇದು ಯಾರಿಗೆ ಸೇರಿದ್ದು ಅಂತಾ ನನಗೆ ಗೊತ್ತಿದೆ . ಸರ್ವೆ ನಂಬರ್ 46/ಜಿ ಇದು ಯಾರ ಹೆಸರಿನಲ್ಲಿ ಇದೆ ಅಂತಾ ನನಗೆ ಗೊತ್ತಿಲ್ಲ . ಸರ್ವೆ ನಂಬರ್ 46/ಜಿ ಐಟಂ ನಂಬರ್ 4 ರಲ್ಲಿ 1 ಎಕರೆ 90 ಸೆಂಟ್ಸ್ ರೇವಣಸಿದ್ದಪ್ಪ ತಂದೆ ಸಿದ್ದಲಿಂಗಪ್ಪ ಇವರಿಗೆ ಬಂದಿದೆ ಅಂದರೆ ಗೊತ್ತಿಲ್ಲ . ಮಹಾದೇವಮ್ಮನಿಗೆ ಜೀವನಾಂಶಕ್ಕೆ ಕೊಟ್ಟ 2 ಎಕರೆ 14 ಸೆಂಟ್ಸ್ ಕೊಟ್ಟಿದ್ದಾರೆ ಅಂತಾ ಹೇಳಿದ್ದು ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ . ಒಟ್ಟು ನಾವು 11 ಎಕರೆ 30 ಸೆಂಟ್ಸ್‌ಗೆ ಸಂಬಂಧಪಟ್ಟಂತೆ ಕೇಸು ಮಾಡಿದ್ದೇವೆ ಅಂದರೆ ಸರಿ . 1940 ರ ಪಾಲು ವಿಭಾಗದಲ್ಲಿ ಸರ್ವೆ ನಂಬರ್ 339, 13 ಎಕರೆ 93 ಸೆಂಟ್ಸ್ ಪೈಕಿ 1 ಎಕರೆ 34 ಸೆಂಟ್ಸ್ 1 ಪ್ಲಾಟ್ ಮತ್ತು 5 ಎಕರೆ 92 ಸೆಂಟ್ಸ್ ರೇವಣಸಿದ್ದಪ್ಪ ತಂದೆ ಸಿದ್ದಲಿಂಗಪ್ಪನ ಪಾಲಿಗೆ ಬಂದಿದೆ ಅಂದರೆ ನನಗೆ ಗೊತ್ತಿಲ್ಲ . ಸರ್ವೆ ನಂಬರ್ 329 8 ಎಕರೆ 36 ಸೆಂಟ್ಸ್ ಪೈಕಿ 4 ಎಕರೆ 14 ಸೆಂಟ್ಸ್ ರೇವಣಸಿದ್ದಪ್ಪ ತಂದೆ ಸಿದ್ದಲಿಂಗಪ್ಪ ಪಾಲಿಗೆ ಬಂದಿದೆ ಅಂದರೆ ಗೊತ್ತಿಲ್ಲ . ( ಅಸಲು ದಾವಾ ಸಂಖ್ಯೆ 12/2009 ರಲ್ಲಿ ಈ ಮೇಲೆ ಕೇಳಿದ ಎಲ್ಲ ಪ್ರಶ್ನೆಗಳನ್ನು ಮಹದೇವಮ್ಮನಿಗೆ ಕೇಳಬೇಕಾಗಿದ್ದು ಅಲ್ಲಿ ಕೇಳಿರುವುದಿಲ್ಲ ಈಗಾಗಲೇ ಆ ದಾವೆ ಡಿಕ್ರಿ ಆಗಿರುವುದರಿಂದ ಅದರಲ್ಲಿ ಮಹದೇವಮ್ಮನಿಗೆ ಕೊಟ್ಟ ಭಾಗದಲ್ಲಿ ಅರ್ಧ ಭಾಗವನ್ನು ಈಗ ವಾದಿ ಕೇಳುತ್ತಿದ್ದು ಅವಳಿಗೆ ಈ ಹಿಂದಿನ ದಾವೆಯ pleading ನ ಅಂಶಗಳನ್ನು ಈ ವಾದಿಗೆ ಕಳುವುದು ಸಮಂಜಸವಲ್ಲ ಮತ್ತು ಈ ಸಾಕ್ಷಿಯು ಆ ಎಲ್ಲ ವಿಷಯಗಳ ಬಗ್ಗೆ ಮಾಹಿತಿ ನೀಡಲು ಸಮರ್ಥ ರು ಇರುವುದಿಲ್ಲ ಯಾಕೆಂದರೆ ಅವರಿಗೆ ಆ ವಿಷಯಗಳ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಅಂತ ವಾದಿ ಪರ ವಕೀಲರು ತಕರಾರು ತೆಗೆದಿದ್ದು ತಕರಾರು ಸಮಂಜಸವಾಗಿದ್ದು ಈ ಹಿಂದಿನ ಕೇಸಿನ ಡಿಕ್ರಿಯನ್ನು ಪ್ರಶ್ನಿಸಿ ಯಾವುದೇ ಪ್ರಶ್ನೆಯನ್ನು ಕೇಳಲು ಆಗುವುದಿಲ್ಲ ಈ ಕೇಸಿಗೆ ಸಂಬಂಧಟಪಟ್ಟ ಸಮಂಜಸ ಪ್ರಶ್ನೆಗಳನ್ನು ಕೇಳಬೇಕಾಗಿ ಪ್ರತಿವಾದಿ ವಕೀಲರಿಗೆ ನಿರ್ದೇಶನ ನೀಡಲಾಗಿದೆ. ) ಈ ದಾವೆಯನ್ನು ಸಲ್ಲಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿದ್ದೇನೆ. ಮಹದೇವಮ್ಮ ದಿಃ 28-2-2009 ರಂದು ಮೃತಪಟ್ಟಿದ್ದಾರೆ. ಈ ಕೇಸನ್ನು ನಾನು ಮಹದೇಮ್ಮನವರು ನೀಡಿದ ಮಾಹಿತಿ ಮತ್ತು ನನ್ನ ವೈಯಕ್ತಿಕ ಮಾಹಿತಿ ಆಧರಿಸಿ ದಾವೆ ಸಲ್ಲಿಸಿದ್ದೇನೆ. ಮಹದೇವಮ್ಮ ನನ್ನ ಗಂಡನ ಸೋದರ ಅತ್ತೆ . ನಾನು ಮುಖ್ಯ ವಿಚಾರಣೆಯಲ್ಲಿ ಶ್ರೀಕಾಂತನನ್ನು ಮಹದೇವಮ್ಮ ದತ್ತಕಕ್ಕೆ ತೆಗೆದುಕೊಂಡಿದ್ದರು ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಮಹದೇವಮ್ಮ ಮತ್ತು ಪ್ರತಿವಾದಿ 1 ಮತ್ತು 2 ಇವರ ಮಧ್ಯ ಮನಸ್ತಾಪ ಆಗಿ ಮಹದೇವಮ್ಮ ಹೊರಗೆ ಬಂದಳು ಅಂತಾ

ಹೇಳಿದ್ದು ಈ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಅಂದರೆ ಸರಿ . ಮಹದೇವಮ್ಮ ಮತ್ತು ಪ್ರತಿವಾದಿ 1 ಮತ್ತು 2 ರವರಿಗೆ ಮನಸ್ತಾಪ ಬಂದಿತ್ತು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಅವರಿಗೆ ಮನಸ್ತಾಪ ಬಂದ ಕಾರಣ ಮಹದೇವಮ್ಮ ಅಸಲು ದಾವಾ ನಂ 31/2005 ಇದನ್ನು ಪಾಲು ವಿಭಾಗ ಕೇಳಿ ದಾವೆ ಸಲ್ಲಿಸಿದಳು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ದತ್ತಕ ಪತ್ರ ವನ್ನು ನಾವು ದಿಃ19-9-2005 ರಂದು ದಾವಣಗೆರೆ ಉಪ ನೋಂದಣಿ ಕಛೇರಿಯಲ್ಲಿ ಮಹದೇವಮ್ಮ ನೋಂದಣಿ ಮಾಡಿಸಿದ್ದಾಳೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ದಿಃ 26-9-2008 ರಂದು ಮಹದೇವಮ್ಮ ನೋಂದಾಯಿತ ಮೃತ್ಯೂ ಪತ್ರ ಬರೆದಿದ್ದಾಳೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಆ ಎರಡೂ ಪತ್ರ ಗಳನ್ನು ನಾನು ಮತ್ತು ಸಾಕ್ಷಿದಾರರ ಸೇರಿ ಸುಳ್ಳು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ 6 ಮತ್ತು 7 ನೇ ಪ್ಯಾರಾದಲ್ಲಿ ತಿಳಿಸಿದ ಕೆಲವು ವಿಚಾರಗಳು ಸುಳ್ಳು ಇವೆ ಅಂದರೆ ಸರಿಯಲ್ಲ . ವಾದ ಪತ್ರದಲ್ಲಿ ನಾನು ಪ್ರತಿವಾದಿಗಳು ಪ್ರಭಾವಿ ವ್ಯಕ್ತಿಗಳು ರಾಜಕೀಯವಾಗಿ ಬೆಂಬಲ ಉಳ್ಳವರು ಆರ್ಥಿಕವಾಗಿ ಸಮರ್ಥರು ಇದ್ದಾರೆ ಅಂತಾ ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ . ಪ್ರತಿವಾದಿಗಳು ಯಾವ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ನನಗೆ ಗೊತ್ತಿಲ್ಲ . ಈ ದಾವೆ ಸಲ್ಲಿಸಲು ನನಗೆ ಯಾವುದೇ ರೀತಿ ಹಕ್ಕು ಮತ್ತು ಅಧಿಕಾರ ಇಲ್ಲದಿದ್ದರು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಈ ದಾವೆಯಲ್ಲಿ ಪ್ರತಿವಾದಿಯರು ಪ್ರತಿವಾದ ಪತ್ರದಲ್ಲಿ ಏನು ಬರೆದು ಹಾಕಿದ್ದಾರೆ ಗೊತ್ತಿಲ್ಲ . ದಾವಾ ಐಟಂ ನಂಬರ್ 1 ಆಸ್ತಿ ಇದು 2 ನೆ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಅಂದರೆ ಸರಿಯಲ್ಲ . ಈ ದಾವೆ ಗೆ ನಾನು ಸರಿಯಾಗಿ ಶುಲ್ಕ ಕಟ್ಟಿಲ್ಲ ಅಂದರೆ ಸರಿಯಲ್ಲ . ದಾವಾ ಆಸ್ತಿಗಳಲ್ಲಿ ಶ್ರೀಕಾಂತನಿಗೆ ಅರ್ಧ ಭಾಗ ಇದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ದತ್ತಕ ಪತ್ರ ಮತ್ತು ಮೃತ್ಯೂ ಪತ್ರವನ್ನು ನಾವೇ ಸೃಷ್ಟಿ ಮಾಡಿಕೊಂಡಿದ್ದೇವೆ ಆ ಕಾರಣ ಶ್ರೀಕಾಂತನಿಗೆ ಈ ದಾವಾ ಅಸ್ತಿಯಲ್ಲಿ ಪಾಲು ಇಲ್ಲ ಅಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ ಕೇ ಸರಿಯಿದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ